**Date: 23-10-2024                OS No. 87/2019**

**( DW-1 )**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು:ಶ್ರೀ ಎನ್.ಎಸ್.ಜಿ ವಕೀಲರಿಂದ ವಾದಿಯರ ಪರಃ

ನನ್ನ ಅಜ್ಜನ ಹೆಸರು ಕಲ್ಲಪ್ಪ. ನನ್ನ ಅಜ್ಜ ಕಲ್ಲಪ್ಪನಿಗೆ ಸತ್ಯಪ್ಪ, ಲಕ್ಷ್ಮಣ, ಮಹಾದೇವ ಮತ್ತು ಭೀಮಪ್ಪ ಅಂತ ನಾಲ್ಕು ಜನ ಮಕ್ಕಳು ಎಂದರೆ ನಿಜ. ಕೊಟಬಾಗಿ ಗ್ರಾಮ ಘಟಪ್ರಭಾ ನದಿಗೆ ಸಮೀಪ ಇರುತ್ತದೆ ಎಂದರೆ ನಿಜ. ಸದರಿ ಗ್ರಾಮದ ಎಲ್ಲಾ ಜಮೀನುಗಳು ನೀರಾವರಿ ಜಮೀನು ಎಂದರೆ ನಿಜ. ಸದರಿ ಜಮೀನುಗಳಲ್ಲಿ ಕಬ್ಬು ಬೆಳೆ ಬೆಳೆಯುತ್ತಾರೆ ಎಂದರೆ ನಿಜ. ಮೊದಲು ನನ್ನ ಅಜ್ಜ ಕಲ್ಲಪ್ಪನಿಗೆ ಕೊಟಬಾಗಿ ಗ್ರಾಮದಲ್ಲಿ ಸ.ನಂ. 143, 435 ಮತ್ತು 139 ರಲ್ಲಿ ಜಮೀನುಗಳು ಇದ್ದವು ಎಂದರೆ ನಿಜ. 1983ರಲ್ಲಿ ನನ್ನ ಅಜ್ಜ ಕಲ್ಲಪ್ಪನಿಗೆ ವಯಸ್ಸಾಗಿದ್ದರಿಂದ ಸದರಿ ಮೂರು ಜಮೀನುಗಳನ್ನು ಆತನ ನಾಲ್ಕು ಜನ ಮಕ್ಕಳಿಗೆ ವಾಟ್ನಿ ಮಾಡಿಕೊಟ್ಟಿದ್ದ ಎಂದರೆ ನಿಜ. ಈ ಬಗ್ಗೆ ಕೊಟಬಾಗಿ ಗ್ರಾಮದ ಡೈರಿ ನಂ.2945 ಆತನ ನಾಲ್ಕು ಮಕ್ಕಳ ಹೆಸರಿಗೆ ಮಂಜೂರಾಗಿತ್ತು ಎಂದರೆ ನಿಜ. ಆ ನಂತರ ಸ.ನಂ.139 ಮತ್ತು 143 ಜಮೀನುಗಳನ್ನು ಅಭಿವೃದ್ಧಿ ಪಡಿಸಲು ನನ್ನ ಅಜ್ಜ ಮತ್ತು ಆತನ ನಾಲ್ಕು ಜನ ಮಕ್ಕಳು ಸೇರಿ ಸ.ನಂ. 435 ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ನಿಜ. ಆ ನಂತರ ನನ್ನ ತಂದೆ ಮತ್ತು ಆತನ ಸಹೋದರರಿಗೆ ಉಳಿದಿರುವ ಜಮೀನುಗಳು ಎಂದರೆ ಸ.ನಂ.139 ಮತ್ತು 143 ಇರುತ್ತವೆ ಎಂದರೆ ನಿಜ. ಆ ನಂತರ ನನ್ನ ತಂದೆ ಮತ್ತು ಆತನ ಮೂರು ಜನ ಸಹೋದರರು ಸದರಿ ಎರಡು ಜಮೀನುಗಳನ್ನು ತಲಾ 1/4 ಹಿಸ್ಸೆಯಂತೆ ವಾಟ್ನಿಮಾಡಿಕೊಂಡಿದ್ದಾರೆ ಎಂದರೆ ನಿಜ. ಸದರಿ ವಾಟ್ನಿಯಲ್ಲಿ ನನ್ನ ತಂದೆ ಸತ್ಯಪ್ಪನ ಪಾಲಿಗೆ ಸ.ನಂ.139/2 ಮತ್ತು ಸ.ನಂ.143/1 ಜಮೀನು ಬಂದಿವೆ ಎಂದರೆ ನಿಜ.

**Date: 23-10-2024 OS No. 87/2019**

**( DW-1 )**

ಸದರಿ ಎರಡೂ ಜಮೀನುಗಳಿಗೆ ನನ್ನ ತಂದೆ ಸತ್ಯಪ್ಪ ಮತ್ತು ಆತನ ಹೆಂಡತಿ-ಮಕ್ಕಳ ಒಟ್ಟು ಕುಟುಂಬದ ಇದೆ ಎಂದರೆ ನಿಜ. ಸದರಿ ಸತ್ಯಪ್ಪನ ಹೆಂಡತಿ-ಮಕ್ಕಳ ಸಮೂಹಿಕ ಕಬ್ಜಾ ವಹಿವಾಟಿಯಲ್ಲಿ ಆತನ ಎರಡೂ ಜಮೀನುಗಳು ಇವೆ ಎಂದರೆ ನಿಜ. ದಾವೆದ ಆಸ್ತಿಗಳಲ್ಲಿ ಈ ವರೆಗು ನನ್ನ ತಂದೆ ಸತ್ಯಪ್ಪ ಮತ್ತು ಆತನ ಹೆಂಡತಿ-ಮಕ್ಕಳ ಮಧ್ಯ ಯಾವುದೇ ವಾಟ್ನಿಯಾಗಿಲ್ಲ ಎಂದರೆ ನಿಜ. ನನ್ನ ತಂದೆಗೆ ದಾವೆದ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ನಿಜ. ದಾವೆದ ಆಸ್ತಿಗಳು ಮೊದಲು ಅಖಂಡ ಸರ್ವೆ ನಂಬರುಗಳಲ್ಲಿ ಇದ್ದು, ಈಗ ನನ್ನ ತಂದೆ ಹೆಸರಿಗೆ ಬೇರೆ ಬೇರೆ ಸರ್ವೆ ನಂಬರಗಳಲ್ಲಿ ಪ್ರತ್ಯೇಕ ದಾಖಲಿರುತ್ತವೆ ಎಂದರೆ ನಿಜ. ಸ.ನಂ.435 ಆಸ್ತಿ ಈಗಾಗಲೆ ಮಾರಾಟ ಮಾಡಿರುವುದರಿಂದ ಅದು ನನ್ನ ಅಜ್ಜನ ಕುಟುಂಬದಲ್ಲಿ ಉಳಿದಿರುವುದಿಲ್ಲ ಎಂದರೆ ನಿಜ. ದಾವೆದ ಆಸ್ತಿಗಳಲ್ಲಿ ಈಗ ಕಬ್ಬು ಬೆಳೆಯುತ್ತಾರೆ ಎಂದರೆ ನಿಜ. ಮೊದಲು ಅದು ಮಡ್ಡಿ ಜಮೀನು ಇತ್ತು. ದಾವೆದ ಆಸ್ತಿಗಳಿಗೆ ಘಟಪ್ರಭಾ ನದಿಯಿಂದ ಪೈಪಲೈನ್ ಮುಖಾಂತರ ನೀರಾವರಿ ಸೌಲಭ್ಯ ತೆಗೆದುಕೊಂಡಿದ್ದೇವೆ ಎಂದರೆ ನಿಜ. ಸದರಿ ಪೈಪಲೈನ್ 20 ವರ್ಷಗಳ ಹಿಂದೆ ಹಾಕಿಸಿದ್ದೇವೆ ಎಂದರೆ ನಿಜ. ದಾವೆದ ಆಸ್ತಿಗಳಿಂದ ಪ್ರತಿವಾದಿಯರಾದ ನಮಗೆ ಸಾಕಷ್ಟು ಆದಾಯ ಬರುತ್ತದೆ ಎಂದರೆ ಸರಿಯಲ್ಲ. ದಾವೆದ ಆಸ್ತಿಗಳಿಂದ ಸಾಕಷ್ಟು ಆದಾಯ ಇದ್ದರೂ ಸಹ, ವಾದಿಗೆ ಲುಕ್ಸಾನ ಮಾಡುವ ಉದ್ದೇಶದಿಂದ ಆದಾಯ ಇಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ರತ್ನವ್ವ ಇವಳಿಗೆ ತನ್ನ ಗಂಡನ ಮನೆಯಲ್ಲಿ 4 ಎಕರೆ ಜಮೀನು ಇದೆ ಎಂದರೆ ನಿಜ. ವಾದಿಯ ಗಂಡನ ಮನೆಯವರು ಸಿರಿವಂತವರಿದ್ದಾರೆ ಎಂದರೆ ಈಗ

**Date: 23-10-2024 OS No. 87/2019**

**( DW-1 )**

ಶ್ರೀಮಂತರಾಗಿದ್ದಾರೆ ಅಂತ ಹೇಳುತ್ತಾರೆ. ಮೊದಲಿನಿಂದಲು ವಾದಿಯ ಗಂಡನ ಮನೆಯವರು ಶ್ರೀಮಂತರಿದ್ದು, ಅವರ ಜಮೀನುಗಳಿಂದ ಸಾಕಷ್ಟು ಆದಾಯ ಇತ್ತು ಎಂದರೆ ಸರಿಯಲ್ಲ. ವಾದಿಯ ಗಂಡನ ಮನೆಯವರು ಶ್ರೀಮಂತರಿದ್ದುದ್ದರಿಂದ ಯಾವತ್ತು ನನ್ನ ತಂದೆಯಿಂದ ಹಣ ಪಡೆಯುವ ಪ್ರಶ್ನೆಯೇ ಬಂದಿಲ್ಲ ಎಂದರೆ ಸರಿಯಲ್ಲ. ವಾದಿಗೆ 1ನೇ ಪ್ರತಿವಾದಿ ಹಣ ಕೊಟ್ಟಿದ್ದಾನೆ ಅಂತ ತೋರಿಸಲು ನಮ್ಮ ಹತ್ತಿರ ಯಾವುದೇ ದಾಖಲೆಗಳು ಇಲ್ಲ ಎಂದರೆ ನಿಜ. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಮತ್ತು ಶಸ್ತ್ರ ಚಿಕಿತ್ಸೆ ಮಾಡಿದ ಬಗ್ಗೆ ಬಿಲ್ಲುಗಳನ್ನು ಕೊಡುತ್ತಾರೆ ಎಂದರೆ ನಿಜ. ನನ್ನ ತಂದೆ ವಾದಿಯ ಹೆಣ್ಣು ಮಕ್ಕಳ ಹೆರಿಗೆ, ಶಸ್ತ್ರ ಚಿಕಿತ್ಸೆ ಮತ್ತು ವಾದಿಯ ಗಂಡು ಮಗನ ಆಸ್ಪತ್ರೆ ಖರ್ಚು ಭರಿಸಿದ್ದಾನೆ ಅಂತ ತೋರಿಸಲು ಯಾವುದೆ ದಾಖಲೆಗಳು ಇರುವುದಿಲ್ಲ. ನನ್ನ ತಂದೆ ಸತ್ಯಪ್ಪ ವಾದಿಯ ಮಕ್ಕಳ ಯಾವುದೆ ಖರ್ಚು ಭರಿಸದೆ ಇದ್ದುದ್ದರಿಂದ ಅಂತ ದಾಖಲೆಗಳು ನಮ್ಮ ಇರುವುದಿಲ್ಲ ಎಂದರೆ ಸರಿಯಲ್ಲ. ಯಾವುದೆ ಕಟ್ಟಿಗೆಗಳನ್ನು ಖರೀದಿ ತೆಗೆದುಕೊಳ್ಳುವಾಗ ಬಿಲ್ಲುಗಳನ್ನು ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗಿಡಗಳನ್ನು ಕಡಿಯುವಾಗ ಅರಣ್ಯ ಎಲಾಖೆಯ ಪರವಾನಗಿ ಪಡೆಯಬೇಕು ಎಂದರೆ ನಿಜ. ನಮ್ಮ ಜಮೀನುಗಳಲ್ಲಿ ಗಿಡಗಳು ಇವೆ ಅಂತ ತೋರಿಸಲು ಯಾವುದೆ ದಾಖಲೆಗಳು ಇಲ್ಲ. ವಾದಿಯ ಗಂಡ ಮನೆ ಕಟ್ಟಿಸುವಾಗ ನನ್ನ ತಂದೆ ಕಟ್ಟಿಗೆ ಸಾಮಾಗ್ರಿಗಳನ್ನು ಖರೀದಿಸಲು ಹಣ ಕೊಟ್ಟಿದ್ದಾರೆ ಅಂತ ತೋರಿಸಲು ಯಾವುದೆ ದಾಖಲೆಗಳನ್ನು ನಾವು ಹಾಜರು ಪಡಿಸಿಲ್ಲ. ನನ್ನ ತಂದೆ ವಾದಿಯ ಗಂಡನಿಗೆ ಮನೆ ಕಟ್ಟಲು ಮತ್ತು ಕಟ್ಟಡದ ಸಾಮಾಗ್ರಿಗಳನ್ನು ಖರೀದಿಸಲು ಯಾವುದೆ ಹಣ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮೊದಲಿನಿಂದಲು ನನಗೆ, ವಾದಿಗೆ ಬಂಗಾರ, ಬಟ್ಟೆ, ವರದಕ್ಷಿಣೆ ಮತ್ತು ಇತ್ಯಾಧಿ ಕೊಟ್ಟು ವಿವಾಹ ಮಾಡಿದ್ದಾನೆ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

**Date: 23-10-2024 OS No. 87/2019**

**( DW-1 )**

ಸರಿಯಲ್ಲ. ಇದು ಅಲ್ಲದೆ, ನನ್ನ ತಂದೆ ನಾನು ಮತ್ತು ವಾದಿ ಹಬ್ಬ ಹರಿದಿನಗಳಲ್ಲಿ ಹೋದಾಗ ಹಣ, ಬಂಗಾರ ಮತ್ತು ಬಟ್ಟೆ ಇತ್ಯಾಧಿ ಕೊಟ್ಟಿದ್ದಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಮನೆಯ ಆರ್ಥಿಕ ಪರಿಸ್ಥಿತಿ ಮೊದಲಿನಿಂದಲು ಚೆನ್ನಾಗಿದೆ ಎಂದರೆ ಸರಿಯಲ್ಲ. ನಮ್ಮ ಮನೆತನ ಸ್ಥಿತಿವಂತ ಮನೆತನ ಇರುವುದರಿಂದ ನನ್ನತಂದೆಗೆ ಯಾವತ್ತು ಸಾಲ ಮಾಡುವ ಅಥವ ಜಮೀನು ಮಾರಾಟ ಮಾಡುವ ಪರಿಸ್ಥಿತಿ ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಾಲ ಮಾಡಿದ್ದಾನೆ ಅಂತತೋರಿಸಲು ನಾವು ಯಾವುದೇ ದಾಖಲೆ ಹಾಜರು ಮಾಡಿಲ್ಲ. ಈಗ ವಾದಿಗೆ ಲುಕ್ಸಾನ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದೂಡಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

Sd/-

ಹಿರಿಯ ದಿವಾಣಿ ನ್ಯಾಯಾಧೀಶರು , ಹುಕ್ಕೇರಿ.